**<u>ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿ: 25-08-2018 ರಂದು ಸಂಜೆ 04:30 ಗಂಟೆಗೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು</u>**

**ಸಭೆಯಲ್ಲಿ ಹಾಜರಿದ್ದವರು:-**

1. ಡಾ॥ ಸುಚೇತನ ಸ್ವರೂಪ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.
2. ಶ್ರೀ ಎನ್.ಪಿ. ರಮೇಶ್, ರಾಜ್ಯ ಮಾಹಿತಿ ಆಯುಕ್ತರು.
3. ಶ್ರೀ ಕೆ.ಎಂ. ಚಂದ್ರೇಗೌಡ, ರಾಜ್ಯ ಮಾಹಿತಿ ಆಯುಕ್ತರು.
4. ಶ್ರೀ ಪಿ.ಜಿ. ವಿಜಯ ಕುಮಾರ್, ರಾಜ್ಯ ಮಾಹಿತಿ ಆಯುಕ್ತರು.
5. ಶ್ರೀ ಎಸ್.ಎಲ್ ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು.
6. ಶ್ರೀ ಹೆಚ್.ಪಿ. ಸುಧಾಮ ದಾಸ್, ರಾಜ್ಯ ಮಾಹಿತಿ ಆಯುಕ್ತರು.
7. ಡಾ॥ ಕೆ.ಇ. ಕುಮಾರಸ್ವಾಮಿ, ರಾಜ್ಯ ಮಾಹಿತಿ ಆಯುಕ್ತರು.
8. ಡಾ॥ ಲಿಂಗರಾಜ್ .ಕೆ, ರಾಜ್ಯ ಮಾಹಿತಿ ಆಯುಕ್ತರು.
9. ಡಾ॥ ಸುನಿಲ್ ಪಂವಾರ್, ಕಾರ್ಯದರ್ಶಿ.
10. ಶ್ರೀಮತಿ ಕಾತ್ಯಾಯಿನಿ ಬಿ.ಎಸ್, ಅಧೀನ ಕಾರ್ಯದರ್ಶಿ (ಪ್ರ).
11. ಶ್ರೀಮತಿ ಮುದ್ದುರತ್ನಮ್ಮ, ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
12. ಶ್ರೀಮತಿ ಲತಾ .ಎಂ, ಅಧೀಕ್ಷಕರು.
13. ಶ್ರೀಮತಿ ಕೆ. ಲಕ್ಷ್ಮೀ, ಅಧೀಕ್ಷಕರು.

**ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:**

1. ಆಯೋಗದ ಕಾರ್ಯದರ್ಶಿಯವರು ಸಭೆಗೆ ಆಗಮಿಸಿದ್ದ ಮಾನ್ಯ ಮುಖ್ಯ ಮಾಹಿತಿ ಆಯುಕ್ತರು ಹಾಗೂ ಎಲ್ಲಾ ಮಾಹಿತಿ ಆಯುಕ್ತರುಗಳಿಗೆ ಸ್ವಾಗತವನ್ನು ಕೋರಿದರು.

**2. ಅನುಪಾಲನಾ ವರದಿ.**

ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿನಾಂಕ: 15-03-2018ರಂದು ಮಾನ್ಯ ಮುಖ್ಯ ಮಾಹಿತಿ ಆಯುಕ್ತರ ಸಮ್ಮುಖದಲ್ಲಿ ನಡೆದ ಸಭೆಯ ನಡವಳಿಯಲ್ಲಿನ ನಿರ್ಣಯಗಳಿಗೆ ತೆಗೆದುಕೊಂಡ ಅನುಪಾಲನಾ ಕ್ರಮಗಳನ್ನು ಕಾರ್ಯದರ್ಶಿಯವರು ಸಭೆಯಲ್ಲಿ ಮಂಡಿಸಿದರು, ಅದರಂತೆ ಸಭೆಯು ಈ ಕೆಳಕಂಡ ಕ್ರಮಗಳನ್ನು ಅನುಮೋದಿಸಿತು.

**ಅ. ದ್ವಿಚಕ್ರ ವಾಹನಗಳಿಗೆ ಮಾಹಿತಿ ಸೌಧದಲ್ಲಿ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸುವ ಬಗ್ಗೆ.**

ಕರ್ನಾಟಕ ಮಾಹಿತಿ ಆಯೋಗದ ನೂತನ ಕಟ್ಟಡವಾದ ಮಾಹಿತಿ ಸೌಧಕ್ಕೆ ವಿಚಾರಣೆಗೆ ಹಾಜರಾಗುವವರಿಗೆ ತಮ್ಮ ದ್ವಿಚಕ್ರ ವಾಹನಗಳನ್ನು ಪಾರ್ಕಿಂಗ್ ಮಾಡಲು ಮಾಹಿತಿ ಸೌಧದ ಹಿಂಭಾಗದಲ್ಲಿ ಸ್ಥಳಾವಕಾಶವನ್ನು ಈಗಾಗಲೇ ಕಲ್ಪಿಸಲಾಗಿರುವುದು ಸರಿಯಷ್ಟೆ. ಸದರಿ ಪಾರ್ಕಿಂಗ್ ಸ್ಥಳದಲ್ಲಿ ಒಂದು ಬೋರ್ಡ್‌ನ್ನು ಹಾಕಿಸಿ ಆ ಬೋರ್ಡ್‌ನಲ್ಲಿ "ವಿಚಾರಣೆಗೆ ಹಾಜರಾಗುವವರಿಗೆ" ಬೆಳಿಗ್ಗೆ 10.30 ರಿಂದ ಸಂಜೆ 5.00 ಗಂಟೆಯವರಿಗೆ ಮಾತ್ರ ಎಂದು ಬರೆಸಲು ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಹಾಗೂ ಎಲ್ಲಾ ಆಯುಕ್ತರುಗಳು ಕಾರ್ಯದರ್ಶಿಯವರಿಗೆ ಸೂಚಿಸಿದರು.

ಕ್ರಮ: ಕಾರ್ಯದರ್ಶಿ